ಶ್ರೀಮಾನ್ ಸಿದ್ದಪ್ಪನವರಿಗೆ ಪ್ರಾರ್ಥನೆ ಮಾಡುತ್ತೇನೆ ಮತ್ತು ಪೋಲೀಸ್ ಪ್ರೊಟೆಕ್ಷನ್ ಬೇಕಾದರೆ ಅದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಿಕೊಡುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತೇನೆ. ಈ ಘಟನೆಯು ಪಕ್ಷಗಳ ಭೇದ ಭಾವನೆಯಿಂದ ನಡೆದಿರತಕ್ಕ ಘಟನೆ ಆಗಿದೆ. ಆದ್ದರಿಂದ ಎಲ್ಲರೂ ಕೂಡ ಇದರ ಬಗ್ಗೆ ಸಾಕಾದಷ್ಟು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೆ ನಾನು ತಮ್ಮೆಲ್ಲರಿಗೂ ಸಮಾಧಾನ ತಂದುಕೊಳ್ಳಿ ಬೇಕೆಂದು ಹೇಳಲು ಇಷ್ಟಪಡುತ್ತೇನೆ.

2-30 P.M.

Taking up the Birla Affairs for Discussion

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ ೩೧೨ರ ಪ್ರಕಾರ ೨-೩ ದಿನಗಳ ಹಿಂದೆ ನೋಟೀಸ್ ಕಳುಹಿಸಿದ್ದೆ ಅದು ಅತಿ ಮುಖ್ಯವಾವ ವಿಷಯ ಆದ್ದರಿಂದ ಶ್ರೀಮಾನ್ ಕಾಗೋಡು ತಿಮ್ಮಪ್ಪ ಮತ್ತು ೫-೬ ಜನ ಸೇರಿ ನೋಟೀಸ್ ಕೊಟ್ಟಿದ್ದೇವೆ. ಅದು ನಮ್ಮ ಆದೇಶದಲ್ಲಿರುವ ಬಿರ್ಲಾರವರ ಬಗ್ಗೆ ಆಗಿದೆ.

ಅಧ್ಯಕ್ಷರು —ಅದನ್ನು ಕಳುಹಿಸಿದ್ದೇವೆ ಉತ್ತರ ಬಂದ ತಕ್ಷಣ ಅಜೆಂಡಾದಲ್ಲಿ ಹಾಕುತ್ತೇವೆ.

Delay in taking up Miscellaneous notices

ಶ್ರೀ ಎಂ. ಎಸ್. ಕೃಷ್ಣನ್.—ಅದು ಕಾಲ್ ಅಟೆನ್‌ಷನ್ ಮೋಷನ್ ಅಲ್ಲ ರೂಲ್ ೩೧೨ ರ ಪ್ರಕಾರ ತಮ್ಮ ಮೂಲಕ ಸರ್ಕಾರದ ಗಮನವನ್ನು ನಾನು ಸೆಳೆಯುವುದಕ್ಕೆ ಇಚ್ಛೆ ಪಡುತ್ತೇನೆ.

ಅಧ್ಯಕ್ಷರು.—ಮುಖ್ಯಮಂತ್ರಿಗಳು ಬರಲಿ.

ಶ್ರೀ ಕಾಗೋಡು ತಿಮ್ಮಪ್ಪ.—ರೂಲ್ ೩೧೨ರ ಪ್ರಕಾರ ಚರ್ಚೆ ಮಾಡುವುದಕ್ಕೆ ಬೆಂಗಳೂರು ನಗರದ ಉಪಾಧ್ಯಾಯರ ಶೋಷಣೆ ಬಗ್ಗೆ ಮತ್ತು ಕೆಲವು ಖಾಸಗಿ ಶಾಲೆಗಳಲ್ಲಿ ನಡೆಯತಕ್ಕ ವ್ಯಾಪಾರಿ ಮನೋ ಭಾವದ ಆಡಳಿತದ ಬಗ್ಗೆ ಚರ್ಚೆ ಮಾಡುವ ಒಂದು ವಿಷಯ ತಮಗೆ ಕಳುಹಿಸಿಕೊಟ್ಟಿದ್ದೆ?

ಅಧ್ಯಕ್ಷರು.—ಮಂತ್ರಿಗಳು ಬರಲಿ.

ಶ್ರೀ ಕೊಣಂದೂರು ಲಿಂಗಪ್ಪ.—ಅರಣ್ಯ ಸಚಿವರು ಇದ್ದಾರೆ, ಮಲೆನಾಡಿನಲ್ಲಿ ಇವೊತ್ತು ಕಟ್ಟಿಗೆ ಗಾಡಿಗೆ ಎರಡೂವರೆ ರೂಪಾಯಿ ವಸೂಲು ಮಾಡಬೇಕು ಎಂದು ಆದೇಶ ಇದ್ದರೂ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಗಾಡಿಗೆ ೫ ರೂಪಾಯಿ ವಸೂಲು ಮಾಡುತ್ತಿದ್ದಾರೆ ಮತ್ತು ಅಸೇಕರಿಗೆ ತೊಂದರೆಕೊಡುತ್ತಿದ್ದಾರೆ, ಇದರ ಬಗ್ಗೆ ಷಾರ್ಟ್ ನೋಟೀಸ್ ಕೊಶ್ಚನ್ ಕಳುಹಿಸಿ ೬-೭ ದಿವಸಗಳಾಯಿತು.

ಅಧ್ಯಕ್ಷರು.—ಇವೊತ್ತು ಅಥವಾ ನಾಳೆ ಉತ್ತರ ಬರುತ್ತದೆ. ಬಂದ ತಕ್ಷಣ ಅಜೆಂಡಾದಲ್ಲಿ ಹಾಕುತ್ತೇವೆ.

Protection to member (contd.)

ಶ್ರೀ ಕೆ. ಎಚ್. ಹನುಮೇಗೌಡ.—ಕಳೆದ ೨೦ ದಿವಸಗಳ ಮೇಲಾದರೂ ಆ ಕೇಡಿಗಳನ್ನು ಅರೆಸ್ಟ್ ಮಾಡಿಲ್ಲ. ಅವನು ಯಾರದೋ ಆಶ್ರಯಪಡೆದು ಅಲ್ಲಿಯೇ ಓಡಾಡುತ್ತಿದ್ದಾನೆ. ಅವನ ಮೇಲೆ ಆಕ್ಷನ್ ತೆಗೆದುಕೊಂಡಿಲ್ಲ. ಪೋಲೀಸರನ್ನು ಕೇಳಿದರೆ ಬೇರೆಯವರನ್ನು ಹಿಡಿದುಕೊಂಡು ಹೇಳಿಕೆ ತೆಗೆದುಕೊಂಡು ಕಳುಹಿಸುತ್ತಾರೆ. ಹಿಂದುಗಡೆ ಇದ್ದುಕೊಂಡು ದುಡ್ಡನ್ನು ಕೊಡುವವರನ್ನು ವಿಚಾರಣೆ ಮಾಡಿಲ್ಲ. ಪೋಲೀಸರು ಆಕ್ಷನ್ ತೆಗೆದುಕೊಂಡಿಲ್ಲ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಏನೂ ಹೇಳಲಿಲ್ಲ. ಅವರು ಈ ವಿಚಾರದಲ್ಲಿ ಸ್ಪಷ್ಟವಾಗಿ ಹೇಳಬೇಕೆಂದು ಒತ್ತಾಯಮಾಡುತ್ತೇನೆ.

ಅಧ್ಯಕ್ಷರು.—ಎಲ್ಲ ವಿವರ ತರಿಸುವುದಕ್ಕೆ ಏರ್ಪಾಡು ಮಾಡಿದ್ದೇವೆಂದು ಹೇಳಿದರು.